# ನಿಮಗೆ ಹಣದ ಬಗ್ಗೆ ಭರವಸೆ ನೀಡುವ ಇಮೇಲ್‌ಗಳು/ ಎಸ್.ಎಂ.ಎಸ್ ಗಳು ಮತ್ತು ಕರೆಗಳಿಂದ ಮೋಸ ಹೋಗಬೇಡಿ.

**ವಿದೇಶದಿಂದ ಬರುವ ಹಣದ ಕಾಲ್ಪನಿಕ ಹಾಗು ಅನುಮಾನಾಸ್ಪದ ಕೊಡುಗೆಗಳ ಕುರಿತಾಗಿ ಬರುವ ಇಮೇಲ್‌ಗಳು, ಎಸ್.ಎಂ.ಎಸ್ ಗಳು ಮತ್ತು ಫೋನ್ ಕರೆಗಳ ಬಗ್ಗೆ ಎಚ್ಚರದಿಂದಿರಿ.**

**ಆರ್‌ಬಿಐ ಎಚ್ಚರಿಸುತ್ತದೆ**

- RBI ಯಾವುದೇ ವ್ಯಕ್ತಿಗಳ ಖಾತೆಗಳನ್ನು ಹೊಂದಿರುವುದಿಲ್ಲ.
- RBI ಅಧಿಕಾರಿಗಳಂತೆ ಅನುಕರಿಸಲಾಗುವ ಹೆಸರುಗಳ ಬಗ್ಗೆ ಎಚ್ಚರದಿಂದಿರಿ
- RBI ನಿಂದ ಯಾರೂ ಕರೆ ಮಾಡಿ ಲಾಟರಿ ಗೆದ್ದಿರುವ ಬಗ್ಗೆ ಅಥವಾ ವಿದೇಶದಿಂದ ಹಣ ಬಂದ ಬಗ್ಗೆ ಜನರಿಗೆ ತಿಳಿಸುವುದಿಲ್ಲ.
- RBI ಎಂದಿಗೂ ಕೂಡ, ನೀವು ಲಾಟರಿ ಹಣ ಅಥವಾ ಇತ್ಯಾದಿಯನ್ನು ಗೆದ್ದಿರುವಿರಿ ಎಂಬಂತೆ ಇಮೇಲ್ ಕಳುಹಿಸುವುದಿಲ್ಲ.
- ಲಾಟರಿ ಗೆದ್ದಿರುವಂತೆ ಹೇಳಿಕೊಂಡು ಕಾಲ್ಪನಿಕ ಹಾಗು ಅನುಮಾನಾಸ್ಪದ ಕೊಡುಗೆಗಳನ್ನು ನೀಡಿ ಅಥವಾ ವಿದೇಶದಿಂದ ಹಣ ಬಂದಿತೆಂದು ನಿಮ್ಮನ್ನು ಸಂಪರ್ಕಿಸಲು RBI ಯಾವುದೇ ಎಸ್.ಎಂ.ಎಸ್, ಪತ್ರ ಅಥವಾ ಇಮೇಲ್ ಅನ್ನು ಕಳುಹಿಸುವುದಿಲ್ಲ.
- ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಏಕೈಕ, ಅಧಿಕೃತ ಮತ್ತು ನಿಜವಾದ ವೆಬ್‌ಸೈಟ್ ಇದಾಗಿದೆ https://www.rbi.org.in/ or https://rbi.org.in/ ಈ ಕುರಿತು ಸಾರ್ವಜನಿಕರು ಜಾಗರೂಕರಾಗಿರಬೇಕು ಮತ್ತು ನಕಲಿ ಚಿನ್ಹೆ ಅಥವಾ ಲೋಗೋ ಬಳಸಿಕೊಂಡು 'ರಿಸರ್ವ್ ಬ್ಯಾಂಕ್', 'ಆರ್‌ಬಿಐ' ('Reserve Bank', 'RBI') ಸೇರಿದಂತೆ ಇತ್ಯಾದಿ ಹೆಸರಿನಿಂದ ಪ್ರಾರಂಭವಾಗುವ ಮತ್ತು ನೋಡಲು ಒಂದೇ ರೀತಿಯ ವಿಳಾಸವಿರುವ ನಕಲಿ ವೆಬ್‌ಸೈಟ್‌ಗಳಿಂದ ದಾರಿತಪ್ಪದಂತೆ ಸೂಚಿಸಲಾಗಿದೆ.
- ಇಂತಹ ವಂಚನೆಗಳು ನಿಮ್ಮ ಗಮನಕ್ಕೆ ಬಂದರೆ, ತಕ್ಷಣವೇ ಸ್ಥಳೀಯ ಪೋಲೀಸ್ ಅಥವಾ ಸೈಬರ್ ಕ್ರೈಮ್ ಪ್ರಾಧಿಕಾರಕ್ಕೆ ಮಾಹಿತಿ ನೀಡಿ.
- ಲಾಟರಿಯಲ್ಲಿ ಭಾಗವಹಿಸಲು ಅಥವಾ ಬಹುಮಾನ ಪಡೆಯಲು ವಿದೇಶಕ್ಕೆ ಹಣ ಕಳುಹಿಸುವುದನ್ನು ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ (Foreign Exchange Management Act), 1999 ರ ಅಡಿಯಲ್ಲಿ ನಿಷೇಧಿಸಲಾಗಿದೆ.
- RBI ಯಾವುದೇ ವ್ಯಕ್ತಿಯ, ಕಂಪನಿಗಳ, ಟ್ರಸ್ಟ್ ಗಳ ಖಾತೆ ಅಥವಾ ವಿತರಣೆಗಾಗಿ ಯಾವುದೇ ವಿದೇಶಿ ನಿಧಿಯನ್ನು ಹೊಂದಿರುವುದಿಲ್ಲ.
- ವಿದೇಶದಿಂದ ಬಂದ ಹಣವನ್ನು ಇಟ್ಟುಕೊಂಡಿರುವ ಹಾಗೆ ಅಥವಾ ಆ ಹಣವನ್ನು ಇಟ್ಟುಕೊಂಡಿರುವುದಕ್ಕೆ ಸಾಕ್ಷಿಯಾಗಿ ರಶೀದಿ ಇದೆಯೆಂದು, RBI ಯಾವುದೇ ಪ್ರಮಾಣಪತ್ರಗಳನ್ನು ನೀಡುವುದಿಲ್ಲ.
- ಅಪರಾಧಿಗಳನ್ನು ಹಿಡಿಯಲು ನೀವು ತಕ್ಷಣ ಅಂತಹ ಕೊಡುಗೆಗಳ ವಿವರಗಳನ್ನು ಸ್ಥಳೀಯ ಪೊಲೀಸ್ ಅಧಿಕಾರಿಗಳ ಅಥವಾ ಸೈಬರ್ ಕ್ರೈಮ್ ಸೆಲ್ ನ ಗಮನಕ್ಕೆ ತರಬಹುದು.
- ನಿಮ್ಮ ಬ್ಯಾಂಕ್ ಖಾತೆಗಳನ್ನು ನಿರ್ವಹಿಸಲು ಇತರರಿಗೆ ಅನುಮತಿಸಬೇಡಿ! ನಗದು ಕೊಡುಗೆಗಳಿಗೆ ಬದಲಾಗಿ ನಿಮ್ಮ ಖಾತೆಯ ವಿವರಗಳನ್ನು ಹಂಚಿಕೊಳ್ಳಲು ಒಪ್ಪಬೇಡಿ!!

**ಈ ಬಗ್ಗೆ ಸಾರ್ವಜನಿಕರನ್ನು ಎಚ್ಚರಿಸಲು ರಿಸರ್ವ್ ಬ್ಯಾಂಕ್ ಏನಾದರೂ ಮಾಡುತ್ತಿದೆಯೇ?**

ರಿಸರ್ವ್ ಬ್ಯಾಂಕ್ ಈ ಹಿಂದೆ ಅನೇಕ A.P. (DIR ಸರಣಿ) ಸುತ್ತೋಲೆಗಳನ್ನು ಹೊರಡಿಸಿದ್ದು, ಅಂತಹ ವಂಚನೆಗಳ ಬಗ್ಗೆ ವಿದೇಶಿ ವಿನಿಮಯದಲ್ಲಿ ವ್ಯವಹರಿಸಲು ಅಧಿಕಾರ ಹೊಂದಿರುವ ಬ್ಯಾಂಕುಗಳಿಗೆ (ಅಧಿಕೃತ ಡೀಲರ್ ಬ್ಯಾಂಕ್‌ಗಳು ಎಂದು ಕರೆಯಲ್ಪಡುವ) ಎಚ್ಚರಿಕೆ ನೀಡಿದೆ. ಇತ್ತೀಚಿನ ಸರಣಿಯೆಂದರೆ A.P. (DIR ಸರಣಿ) ಸರ್ಕ್ಯುಲರ್ ನಂ. 54, ದಿನಾಂಕ 26-ಮೇ-2010.

- RBI, ಇಂತಹ ಕಾಲ್ಪನಿಕ ಹಾಗು ಅನುಮಾನಾಸ್ಪದ ಕೊಡುಗೆಗಳ ವಿರುದ್ಧ ಸಾರ್ವಜನಿಕರಿಗೆ ಎಚ್ಚರಿಕೆ ನೀಡಲು ಪತ್ರಿಕಾ ಪ್ರಕಟಣೆಗಳನ್ನು ನೀಡಿದೆ, ಮತ್ತು ಈ ಪತ್ರಿಕಾ ಪ್ರಕಟಣೆಗಳು RBI ನ ವೆಬ್‌ಸೈಟ್ www.rbi.org.in ನಲ್ಲಿ ಶಾಶ್ವತವಾಗಿ ಲಭ್ಯವಿದೆ.
- RBI, ಭಾರತ ಸರ್ಕಾರದ ಸಮನ್ವಯದೊಂದಿಗೆ "ಜಾಗೋ ಗ್ರಾಹಕ್ ಜಾಗೋ" ಎಂಬ ಜನಜಾಗೃತಿ ಕಾರ್ಯಕ್ರಮದ ಅಡಿಯಲ್ಲಿ, ಎಲೆಕ್ಟ್ರಾನಿಕ್ ಮತ್ತು ಮುದ್ರಣ ಮಾಧ್ಯಮದಲ್ಲಿ ಈ ವಿಚಾರಗಳ ಬಗ್ಗೆ ಪ್ರಚಾರ ಮಾಡಿದೆ.
- ಇಂತಹ ಮೋಸ ಮಾಡುವ ಕೊಡುಗೆಗಳ ಬಗ್ಗೆ ಸ್ಪಷ್ಟ ಚಿತ್ರಣ ಪಡೆಯಲು ನಮ್ಮನ್ನು ಸಂಪರ್ಕಿಸುವ ಜನರಿಗೆ, ಸ್ಥಳೀಯ ಪೊಲೀಸರಿಗೆ ದೂರು ಸಲ್ಲಿಸಲು ನಾವು ಸಲಹೆಯನ್ನೂ ನೀಡುತ್ತೇವೆ.

**ಇಂತಹ ಅಪರಾಧಗಳ ಬಗ್ಗೆ RBI ತನಿಖೆ ನಡೆಸುತ್ತಿದೆಯೇ?**

- ರಿಸರ್ವ್ ಬ್ಯಾಂಕ್ ಗೆ, ಅಪರಾಧಿಗಳನ್ನು ಪತ್ತೆಹಚ್ಚಲು ಮತ್ತು ಹಿಡಿಯಲು ಯಾವುದೇ ತನಿಖಾ ಅಧಿಕಾರವಿರುವುದಿಲ್ಲ.
- ವಿದೇಶಿ ವಿನಿಮಯ ನಿರ್ವಹಣೆ ಕಾಯಿದೆ (FEMA), 1999 ರ ಅಡಿಯಲ್ಲಿ, ಜಾರಿ ನಿರ್ದೇಶನಾಲಯವು ರಿಸರ್ವ್ ಬ್ಯಾಂಕ್ ನ ತನಿಖಾ ಸಂಸ್ಥೆಯಾಗಿದೆ.
- ವಂಚನೆಗೆ ಒಳಗಾದವರು, ವಂಚಕರ ವಿರುದ್ಧ ಕ್ರಮ ಕೈಗೊಳ್ಳಲು ಅಧಿಕಾರವಿರುವ ಸ್ಥಳೀಯ ಪೊಲೀಸರನ್ನು ಸಂಪರ್ಕಿಸಬೇಕು ಮತ್ತು ಭವಿಷ್ಯದಲ್ಲಿ ಅಂತಹ ವಂಚನೆಗಳು ಮತ್ತೆ ಸಂಭವಿಸದಂತೆ ನೋಡಿಕೊಳ್ಳಬೇಕು.

**ಇಂತಹ ನಕಲಿ ಕೊಡುಗೆಗಳನ್ನು ಸ್ವೀಕರಿಸಿದಾಗ ನಾನು ಏನು ಮಾಡಬೇಕು?**

- ನೀವು ಅಂತಹ ವಿಚಾರಗಳನ್ನು ನಿರ್ಲಕ್ಷಿಸಬೇಕು ಮತ್ತು ಅಂತಹ ಯೋಜನೆಗಳಿಗೆ ಯಾವುದೇ ಹಣವನ್ನು ಪಾವತಿಸಬಾರದು.
- ದೂರನ್ನು ದಾಖಲಿಸಲು ದಯವಿಟ್ಟು ಸ್ಥಳೀಯ ಪೋಲೀಸ್/ ಸೈಬರ್ ಕ್ರೈಮ್ ಸೆಲ್ ಅಥವಾ ಸ್ಥಳೀಯ ಆರ್ಥಿಕ ಅಪರಾಧ ವಿಭಾಗವನ್ನು ಸಂಪರ್ಕಿಸಿ.
- ಸ್ವೀಕರಿಸಿದ ಅಂತಹ ಕಾಲ್ಪನಿಕ ಹಾಗು ಅನುಮಾನಾಸ್ಪದ ಕೊಡುಗೆಗಳ ಬಗ್ಗೆ ಯಾವುದೇ ಸಂದೇಹ ಉಂಟಾದಲ್ಲಿ, ಸಾರ್ವಜನಿಕರು ಸ್ಪಷ್ಟೀಕರಣಕ್ಕಾಗಿ ರಿಸರ್ವ್ ಬ್ಯಾಂಕ್‌ನ ವೆಬ್‌ಸೈಟ್ ಅನ್ನು ಉಲ್ಲೇಖಿಸಬಹುದು.

**ಲಾಟರಿಯಲ್ಲಿ ಭಾಗವಹಿಸಲು ಹೊರದೇಶಕ್ಕೆ ಹಣ ಕಳುಹಿಸುವುದನ್ನು, ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ (FEMA), 1999 ರ ಅಡಿಯಲ್ಲಿ ನಿಷೇಧಿಸಲಾಗಿದೆ!!!**

**ಸಾರ್ವಜನಿಕರಿಗೆ ಮೋಸ ಮಾಡಲು ವಂಚಕರು ಅನುಸರಿಸುವ ವಿಧಾನ**

- ಕೆಲವು ಕಾಲ್ಪನಿಕ ಅಥವಾ ನಕಲಿ ಕೊಡುಗೆಗಳೆಂದರೆ - ಲಾಟರಿ ಗೆಲುವು / ಹೊರದೇಶದಿಂದ ವಿದೇಶಿ ಕರೆನ್ಸಿಯಲ್ಲಿ ಹಣ ರವಾನೆ ಮಾಡುತ್ತೇವೆಂದು / ಉದ್ಯೋಗ ಕೊಡುಗೆಗಳು / ವಿದ್ಯಾರ್ಥಿವೇತನ ಕೊಡುಗೆಗಳು / ವಲಸೆ ವೀಸಾಗಳು / ಪ್ರತಿಷ್ಠಿತ ಸಾಗರೋತ್ತರ ವಿಶ್ವವಿದ್ಯಾಲಯಗಳಿಗೆ ಪ್ರವೇಶಗಳು ಹಾಗು ಇತ್ಯಾದಿ.
- ಇಂತಹ ಕೊಡುಗೆಗಳನ್ನು ಸಾಮಾನ್ಯವಾಗಿ ಪತ್ರ, ಇ-ಮೇಲ್, ಮೊಬೈಲ್ ಫೋನ್, SMS, ಇತ್ಯಾದಿಗಳ ಮೂಲಕ ನೀಡಲಾಗುತ್ತದೆ. ಕೆಲವೊಮ್ಮೆ ವಂಚಕರು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದಿಂದ ಕಳುಹಿಸಲಾಗಿದೆ ಎಂದು ತೋರುವ ಪ್ರಮಾಣಪತ್ರಗಳು, ಪತ್ರಗಳು, ಸುತ್ತೋಲೆ ಹಾಗು ಇತ್ಯಾದಿಗಳನ್ನು ನೀಡುತ್ತಾರೆ, ಮತ್ತು ಅದನ್ನು ಅಸಲಿ ಎಂದು ತೋರಿಸಲು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಉನ್ನತ ಮತ್ತು ಹಿರಿಯ ಅಧಿಕಾರಿಗಳು ಸಹಿ ಹಾಕಿರುವ ಹಾಗೆ ಬಿಂಬಿಸಿರುತ್ತಾರೆ.
- ವಂಚಕರು ತಮ್ಮ ದೂರವಾಣಿ ಸಂಖ್ಯೆ ಅಥವಾ ನಕಲಿ ಇ-ಮೇಲ್ ಐಡಿಗಳೊಂದಿಗೆ ರಿಸರ್ವ್ ಬ್ಯಾಂಕ್‌ನ ಹಿರಿಯ ಅಧಿಕಾರಿಗಳಂತೆ ಬಿಂಬಿಸಿಕೊಳ್ಳುವ ಮೂಲಕ ಜನರ ಮನವೊಲಿಸುತ್ತಾರೆ.
- ವಂಚಕರು, ಸಂಸ್ಕರಣಾ ಶುಲ್ಕ/ವ್ಯವಹಾರ ಶುಲ್ಕ/ತೆರಿಗೆ ಕ್ಲಿಯರೆನ್ಸ್ ಶುಲ್ಕ/ ಕನ್ವರ್ಷನ್ ಶುಲ್ಕ/ ಕ್ಲಿಯರೆನ್ಸ್ ಶುಲ್ಕ ಹಾಗು ಇನ್ನಿತರ ಶುಲ್ಕಗಳ ಹೆಸರಿನಲ್ಲಿ ಅಮಾಯಕರಿಂದ ಹಣವನ್ನು ಪಡೆಯಲು ಹೊಂಚುಹಾಕುತ್ತಾರೆ.
- ವಂಚನೆಯ ಸಂದರ್ಭದಲ್ಲಿ ಇಂತಹ ಸಂಭಾವ್ಯ ಬಲಿಪಶುಗಳಿಗೆ, ಭಾರತದ ವಿವಿಧ ಬ್ಯಾಂಕ್‌ಗಳ ಖಾತೆಗಳಲ್ಲಿ ಹಣವನ್ನು ಠೇವಣಿ ಮಾಡಲು ವಂಚಕರು ಮನವೊಲಿಸುತ್ತಾರೆ..
- ವಂಚಕರು ಆರಂಭದಲ್ಲಿ ಬೇಡಿಕೆ ಇಟ್ಟಿದ ಹಣವನ್ನು ಠೇವಣಿ ಮಾಡಿಸಿಕೊಂಡ ನಂತರ, ಆ ಹಣವನ್ನು ತಕ್ಷಣವೇ ಅವರ ಖಾತೆಯಿಂದ ತೆಗೆದುಕೊಂಡುಬಿಡುತ್ತಾರೆ ಮತ್ತು ವಹಿವಾಟು ತೆರಿಗೆ/ ನೋಂದಣಿ ಶುಲ್ಕ ಎಂಬ ಇತ್ಯಾದಿ ಶುಲ್ಕಗಳ ಹೆಸರಿನಲ್ಲಿ, ಇನ್ನೂ ಹೆಚ್ಚಿನ ಮೊತ್ತವನ್ನು ಠೇವಣಿ ಮಾಡುವಂತೆ ಹೊಸ ಬೇಡಿಕೆಗಳನ್ನು ಮಾಡುತ್ತಾರೆ.

**ಈ ಕೊಡುಗೆಗಳು ನಕಲಿ ಅಥವಾ ಕಾಲ್ಪನಿಕವೇ? ಮತ್ತೆ ಏಕೆ?**

ನಿಖರವಾಗಿ ಹೇಳುವುದಾದರೆ, ಇಂತಹ ಕೊಡುಗೆಗಳ ಸುತ್ತ ಇರುವ ಎಲ್ಲಾ ವಿಚಾರಗಳು ನಕಲಿ ಹಾಗು ಕಾಲ್ಪನಿಕವಾಗಿರುತ್ತವೆ. ವಂಚಕರು ಅಮಾಯಕರನ್ನು ಸಂಪರ್ಕಿಸಲು ಬಳಸುವ ಇಮೇಲ್ ವಿಳಾಸದಿಂದ ಪ್ರಾರಂಭವಾಗಿ, ಫೋನ್‌ನಲ್ಲಿ ಮಾತನಾಡುವ ವ್ಯಕ್ತಿಯವರೆಗೂ ಎಲ್ಲಾವೂ ಕಾಲ್ಪನಿಕವಾಗಿರುತ್ತದೆ ಮತ್ತು ಸ್ವತಃ ಅವರು ನೀಡುವ ಕೊಡುಗೆಗಳೇ ಅನುಮಾನಾಸ್ಪದವಾಗಿರುತ್ತದೆ.

**ಆದರೆ ಕರೆ ಮಾಡಿದವರು ಅಥವಾ ಮೇಲ್ ಮಾಡುವವರು ಹಣವನ್ನು ಆರ್‌ಬಿಐನಲ್ಲಿ ಒಬ್ಬ ವ್ಯಕ್ತಿ/ ಕಂಪನಿ ಅಥವಾ ಟ್ರಸ್ಟ್‌ನ ಹೆಸರಿನಲ್ಲಿರುವ ಖಾತೆಯಲ್ಲಿ ಇರಿಸಲಾಗಿದೆ ಎಂದು ಹೇಳಿದರು ಮತ್ತು ಅವರು ಕೇಳಿದಷ್ಟು ಮೊತ್ತವನ್ನು ಅವರ ಬ್ಯಾಂಕ್ ಖಾತೆಗೆ ಠೇವಣಿ ಮಾಡಿದಾಗ ಮಾತ್ರ ಆರ್‌ಬಿಐ ನಮಗೆ ಹಣವನ್ನು ವಿತರಿಸುತ್ತದೆ ಎಂದು ಹೇಳುತ್ತಾರೆ.**

- ಖಾತೆಗಳಿಂದ ಹಣ ವಿತರಿಸಲು, ರಿಸರ್ವ್ ಬ್ಯಾಂಕ್ ಯಾವುದೇ ವ್ಯಕ್ತಿ/ ಕಂಪನಿ/ ಟ್ರಸ್ಟ್ ಇತ್ಯಾದಿಗಳ ಹೆಸರಿನಲ್ಲಿ ಯಾವುದೇ ಖಾತೆಗಳನ್ನು ನಿರ್ವಹಿಸುವುದಿಲ್ಲ.
- ಯಾವ ವ್ಯಕ್ತಿಗೂ ಭಾರತೀಯ ರಿಸರ್ವ್ ಬ್ಯಾಂಕ್ ನಲ್ಲಿ ಹಣವನ್ನು ಠೇವಣಿ ಮಾಡಲು, RBI ಖಾತೆಗಳನ್ನು ತೆರೆಯುವುದಿಲ್ಲ.
- ಜೊತೆಗೆ ಆರ್‌ಬಿಐ, ಇಂತಹ ಖಾತೆಗಳಲ್ಲಿ ಹಣವನ್ನು ಇಟ್ಟುಕೊಂಡಿದ್ದೇವೆಂದು ದೃಢೀಕರಣದ ಪ್ರಮಾಣಪತ್ರಗಳನ್ನಾಗಲಿ ಅಥವಾ ಇದಕ್ಕೆ ಸಾಕ್ಷಿಯಾಗಿ ರಶೀದಿಯನ್ನಾಗಲಿ ನೀಡುವುದಿಲ್ಲ.
- ರಿಸರ್ವ್ ಬ್ಯಾಂಕ್ ತನ್ನ ಯಾವುದೇ ಅಧಿಕಾರಿಗಳಿಗೆ ಅಂತಹ ಮೊತ್ತದ ವಿತರಣೆಗೆ ಅಧಿಕಾರ ನೀಡುವುದಿಲ್ಲ.

**ಇಂತಹ ಯೋಜನೆಗಳು ಮತ್ತು ಕೊಡುಗೆಗಳಲ್ಲಿ ನಾನು ಹಣವನ್ನು ಕಳೆದುಕೊಂಡರೆ, ನನ್ನ ಹಣವನ್ನು ಮರಳಿ ಪಡೆಯುಬಹುದೇ?**

- ವಂಚಕರ ಖಾತೆಗೆ ಠೇವಣಿ ಮಾಡಿದ ಹಣವನ್ನು ಠೇವಣಿ ಮಾಡಿದ ತಕ್ಷಣವೇ ತೆಗೆಯಲಾಗುತ್ತದೆ. ಆದ್ದರಿಂದ ಸ್ವಾಭಾವಿಕವಾಗಿ ನೀವು ನಿಮ್ಮ ಹಣವನ್ನು ಕಳೆದುಕೊಂಡಂತೆ. ಆದರೆ ಮುಖ್ಯವಾಗಿ, ನೀವು ಅವರ ಖಾತೆಗೆ ಹಣವನ್ನು ಠೇವಣಿ ಮಾಡುವ ಮೂಲಕ ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ, 1999 ರ ನಿಬಂಧನೆಗಳನ್ನು ಉಲ್ಲಂಘನೆ ಮಾಡಿರುತ್ತೀರಿ.
- ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ, 1999 ರ ಅಡಿಯಲ್ಲಿ ರೂಪಿಸಲಾದ ಕರೆಂಟ್ ಅಕೌಂಟ್ ನ ನಿಯಮಗಳ ಪ್ರಕಾರ, ಬಹುಮಾನದ ಹಣ/ ಪ್ರಶಸ್ತಿ ಇತ್ಯಾದಿಗಳನ್ನು ಗಳಿಸುವ ಉದ್ದೇಶಕ್ಕಾಗಿ, ಲಾಟರಿ ಯೋಜನೆ ಅಥವಾ ವಿವಿಧ ಹೆಸರುಗಳಲ್ಲಿ ಕಾರ್ಯನಿರ್ವಹಿಸುವ ಲಾಟರಿಯಂತಹ ಯೋಜನೆಗಳಾದ ಹಣ ಚಲಾವಣೆ ಸ್ಕೀಮ್ ಗಳು/ ಹಣ ರವಾನೆಯಂತಹ ಸ್ಕೀಮ್ ಗಳಲ್ಲಿ ಭಾಗವಹಿಸಲು ಯಾವುದೇ ರೂಪದಲ್ಲಿ ಹಣ ಕಳುಹಿಸುವುದನ್ನು ನಿಷೇಧಿಸಲಾಗಿದೆ.
- ಅಂತೆಯೇ, ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ, 1999 ರ ಉಲ್ಲಂಘನೆಗಾಗಿ ಭಾರತದ ಹೊರಗೆ ನೇರವಾಗಿ ಅಥವಾ ಪರೋಕ್ಷವಾಗಿ ಇಂತಹ ಹಣ ಸಂಗ್ರಹಿಸಿದರೆ ಮತ್ತು ಸಂಗ್ರಹಿಸಲು ಪರಿಣಾಮ ಬೀರಿದರೆ ಅಥವಾ ಹಣವನ್ನು ರವಾನಿಸಿದರೆ, ಭಾರತದಲ್ಲಿ ನೆಲೆಸಿರುವ ಯಾವುದೇ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳಬಹುದು.

**ಇಂತಹ ವಂಚನೆಗಳ ಬಗ್ಗೆ ಆರ್‌ಬಿಐ ಏಕೆ ಕಾಳಜಿ ವಹಿಸುತ್ತಿದೆ?**

- ಅನೇಕ ಜನರು ಇಂತಹ ಕಾಲ್ಪನಿಕ/ ನಕಲಿ ಹಣದ ಕೊಡುಗೆಗಳಿಗೆ ಬಲಿಯಾಗಿದ್ದಾರೆ ಮತ್ತು ದೊಡ್ಡ ಮೊತ್ತದ ಹಣವನ್ನು ಕಳೆದುಕೊಂಡಿರುತ್ತಾರೆ.
- ಇದಲ್ಲದೆ, ಇಂತಹ ಉದ್ದೇಶಕ್ಕಾಗಿ ಭಾರತದಿಂದ ಹೊರಗೆ ಹಣವನ್ನು ರವಾನೆ ಮಾಡುವುದು FEMA, 1999 ರ ನಿಬಂಧನೆಗಳಿಗೆ ವಿರುದ್ಧವಾಗಿದೆ.
- ಖಾತೆಗಳಿಂದ ಹಣ ವಿತರಿಸಲು, ರಿಸರ್ವ್ ಬ್ಯಾಂಕ್ ಯಾವುದೇ ವ್ಯಕ್ತಿ/ ಕಂಪನಿ/ ಟ್ರಸ್ಟ್ ಇತ್ಯಾದಿಗಳ ಹೆಸರಿನಲ್ಲಿ ಯಾವುದೇ ಖಾತೆಗಳನ್ನು ನಿರ್ವಹಿಸದಿದ್ದರೂ ಸಹ, ರಿಸರ್ವ್ ಬ್ಯಾಂಕ್ ನ ಉನ್ನತ ಕಾರ್ಯನಿರ್ವಾಹಕ ಅಧಿಕಾರಿಗಳ ಹೆಸರಿನಲ್ಲಿ ಸಹಿ ಮಾಡಲಾದ ನಕಲಿ RBI ಲೆಟರ್ ಹೆಡ್‌ಗಳನ್ನು ಹೊಂದಿರುವ ಪತ್ರಗಳು ಅಥವಾ ಪ್ರಮಾಣಪತ್ರಗಳು ಇತ್ಯಾದಿಗಳು ಚಲಾವಣೆಯಲ್ಲಿವೆ.
- ಅಲ್ಲದೆ, ವಂಚಕರು ರಿಸರ್ವ್ ಬ್ಯಾಂಕ್‌ನ ಅಧಿಕಾರಿಗಳಂತೆ ಹೇಳಿಕೊಂಡು, ಅಮಾಯಕರರಿಗೆ ದೂರವಾಣಿ ಸಂಖ್ಯೆ ಮತ್ತು ನಕಲಿ ಇಮೇಲ್ ವಿಳಾಸವನ್ನು ನೀಡುವ ಮೂಲಕ ದೂರವಾಣಿ ಮೂಲಕ ಸಂಪರ್ಕಿಸುತ್ತಾರೆ.
- ಸಾರ್ವಜನಿಕರ ಗಮನ ಸೆಳೆದು ದಿಕ್ಕುತಪ್ಪಿಸಲು, ರಿಸರ್ವ್ ಬ್ಯಾಂಕ್ ನ ವೆಬ್‌ಸೈಟ್ ಅನ್ನೇ ನಕಲು ಮಾಡುವ ಪ್ರಯತ್ನಗಳೂ ಸಾಕಷ್ಟು ನಡೆದಿವೆ.